

ಮೀರಿ ಯೋಚಿಸಲು ಧೈರ್ಯ ಮಾಡಲಿಲ್ಲ. ಮೇಲೆದ್ದೆ, ಉಣ್ಣೆಯ ಶಾಲನ್ನು ತಂದವಳೇ ಅವಳಿಗೆ ಹೊದಿಸಿ, ಅವಳ ಕೈ ಹಿಡಿದು, ಅಗ್ಗಿಷ್ಟಿಕೆ ಬಳಿ ಕುಳ್ಳಿರಿಸಿದೆ. ತದನಂತರ, ರಜಾಯಿ ಪಕ್ಕಕ್ಕಿಟ್ಟು ಅವಳ ಪಕ್ಕ ಕುಳಿತು ಪಾತ್ರೆ ತೊಳೆಯಲು ಕೈ ಹಚ್ಚಿದೆ. ಆ ಸರಳ ಜೀವಿ ಪಾತ್ರೆ ಉಜ್ಜುವ ನನ್ನ ಕೆಲಸಕ್ಕೆ ಪದೇ ಪದೇ ತಡೆ ಒಡ್ಡಿತು. ನನ್ನ ನಾದಿನಿ ಕುತೂಹಲಗೊಂಡು ಬಂದು ನೋಡಿದವಳೆ ನಾನು ಅವಳೊಂದಿಗೆ ಚಕ್ಕಂದವಾಡುತ್ತಿರುವೆನೇನೋ ಎಂಬಂತೆ ಮುಖ ಊದಿಸಿ ಕಣ್ಮರೆಯಾದಳು. ಈ ಒಂದು ಸಣ್ಣ ಕೃತ್ಯದಿಂದಾಗಿ ಇಡೀ ಮನೆ ಪ್ರಕ್ಷುಬ್ಧತೆಯ ಗೂಡಾಯಿತು. ಅದ್ಯಾವ ದಪ್ಪ ಮುಸುಕುಗಳು ನಮ್ಮ ಕಣ್ಣುಗಳನ್ನು ಆವರಿಸಿವೆ! ನಾವು ದೇವರನ್ನು ಅದೆಷ್ಟು ಅವಮಾನಿಸುತ್ತಿದ್ದೇವೆ!

## ಪತಿ

ಸ್ತ್ರೀಯರು ಮಧ್ಯಸ್ಥ ಮನೋವೃತ್ತಿಯ ಪಥ ಹಿಡಿಯಲಾರರು ಎಂಬುದು ಅವರ ಸಹಜ ಗುಣ ಎಂಬುದು ವಾಸ್ತವ ಸಂಗತಿ. ಅವರು ಒಂದು ರೀತಿಯ ಅಥವಾ ಇನ್ನೊಂದು ರೀತಿಯ ವಿಪರೀತಕ್ಕೆ ಹೋಗುತ್ತಾರೆ. ವೃಂದಾ, ತನ್ನ ಕುಲೀನ ಜಾತಿಯ ಶ್ರೇಷ್ಠತೆಗೆ ಹಾಗೂ ಉತ್ತಮ ಸಂತಾನೋತ್ಪತ್ತಿಯ ಭ್ರಮೆಯಿಂದಾಗಿ ನನ್ನ ಪ್ರಾಣ ಬೇಕಾದರೂ ತ್ಯಾಗ ಮಾಡಲು ಸಿದ್ಧಳಾದವಳು. ಈಗ ಸಮಾನತೆ ಮತ್ತು ಸಹಾನುಭೂತಿಯ ಸಾಕಾರಮೂರ್ತಿಯಾಗಿ ಪರಿವರ್ತಿತಳಾಗಿದ್ದಳು. ಇದು ಅವಳ ಮೇಲಾದ ನನ್ನ ಸರಳ ಬೋಧನೆಗಳ ಅದ್ಭುತ ಫಲಿತಾಂಶ! ನನ್ನ ಸ್ಫೂರ್ತಿದಾಯಕ ಶಕ್ತಿಯ ಬಗೆಗೆ ನನಗೂ